**Spl.C. 3/2020.**

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.

| | | | |
|---|---|---|---|
| ಹೆಸರು | : | ರೇಖಾ @ ರೇಣುಕಾ ತಳಗೇರಿ | ಫ್ರಾಸಾ-27 |
| ತಂದೆಯ ಹೆಸರು | : | ಕಾಡಪ್ಪ | ಚಾಸಾ- 16 |
| ವಯಸ್ಸು | : | 18 ವರ್ಷ | |
| ಉದ್ಯೋಗ | : | ವಿದ್ಯಾರ್ಥಿನಿ | |
| ವಾಸಸ್ಥಳ | : | ಶಿರೋಳ, ತಾಃಮುಧೋಳ | |

ದಿನಾಂಕಃ 27-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಚಾಸಾ-1 ನನ್ನ ದೊಡ್ಡಪ್ಪ. ಚಾಸಾ-5 ರಿಂದ 26 ನನ್ನ ಸಂಬಂಧಿಕರು.

ದಿನಾಂಕಃ 15-10-2019 ರಂದು ಮಂಗಳವಾರ ಆ ದಿನ ನಾನು ಕರಾಟೆ ಕ್ಲಾಸ್ ಕಲಿಯಲು ಮುಧೋಳಕ್ಕೆ ಬಂದಿದ್ದೆ. ಕರಾಟೆ ಕ್ಲಾಸ್ ದರ್ಗಾದ ಹತ್ತಿರವಿದೆ. ಕರಾಟೆ ಕ್ಲಾಸ ಮುಗಿಸಿಕೊಂಡು 2.30 ಗಂಟೆಗೆ ಸಯ್ಯದ್ ಸಾಬಿ ಆಟೋ ರಿಕ್ಷಾಗೆ ಹತ್ತಿದೆ. ಆಟೋ ನಂ.ಕೆಎ-48/ಎ-0509. ಪ್ರತಿ ರವಿವಾರ ಕರಾಟೆ ಕ್ಲಾಸ ಕಲಿಯಲು ಮುಧೋಳಕ್ಕೆ ಹೋಗುತ್ತಿದ್ದೆ. ನಾವು ಸಯ್ಯದ್‌ಸಾಬ ಆಟೋ ರಿಕ್ಷಾದಲ್ಲಿ ಹೋಗಿ ಬಂದು ಮಾಡುತ್ತಿದ್ದೆವು. 10-12 ಜನ ಕರಾಟೆ ಕ್ಲಾಸ ಕಲಿಯುತ್ತಿದ್ದೆವು. ಕರಾಟೆ ಕ್ಲಾಸ ಶಿಕ್ಷಕರ ಹೆಸರು ಮುರ್ತುಜಾ ಇರುತ್ತದೆ. ಅವರು ಪ್ರತಿ ರವಿವಾರ ಕರಾಟೆ ಕ್ಲಾಸ್ ಕಲಿಸುತ್ತಿದ್ದರು. ಮೇಲಿನ ಅಗಸಿಗೆ ಬಂದೆವು. ಅದೇ ಆಟೋದಲ್ಲಿ ಬಂದೆವು. ನನ್ನ ಅತ್ತೆ ಮಗಳು ಕಾಂಚನಾ ಅತ್ತೆ ಮನೆಗೆ

ಹೊರಟಿದ್ದಳು. ನಾವಿಬ್ಬರೂ ಮಾತನಾಡುತ್ತ ಹೊರಟಿದ್ದೆವು. ನಮ್ಮ ತೋಟದ ಮನೆಯಲ್ಲಿ ನನ್ನ ದೊಡ್ಡಪ್ಪ ಮೃತ ವಿಠ್ಠಲ ತಳಗೇರಿ ಹಾಗೂ ಅಜ್ಜ ಮಲ್ಲೆಪ್ಪ ತಳಗೇರಿ ಇವರು ಶೈನ್ ಹೋಂಡಾ ಬೈಕ್ ಮೇಲೆ ಬರುತ್ತಿದ್ದರು. ತೋಟದ ಮನೆಯಿಂದ ಊರ ಕಡೆಗೆ ಕಲ್ಲೊಳ್ಳಿ ರಸ್ತೆಯಲ್ಲಿ ಬರುತ್ತಿದ್ದರು. ಕಲ್ಲೊಳ್ಳಿ ರಸ್ತೆಯಿಂದ ಒಂದು ಸಿಲ್ವರ್ ಬಣ್ಣದ ಕಾರು ಬಂತು. ಕಾರಿನಲ್ಲಿ 5 ಜನರು ಇದ್ದರು. ಅರುಣ ಚಾಲಕನಿದ್ದ, ಚಾಲಕನ ಪಕ್ಕದಲ್ಲಿ ಕಿರಣ, ಹಿಂದಿನ ಸೀಟಿನಲ್ಲಿ ಮಲ್ಲಪ್ಪ ಹುದ್ದಾರ, ರಾಜು, ಶಂಕ್ರೆಪ್ಪ ಇದ್ದರು. ಕಾರ ನಂ.ಕೆಎ–25/ಪಿ–7149. ಅರುಣನ ಬಟ್ಟೆ ಬಿಳಿ ಅಂಗಿ ಕರಿ ಪ್ಯಾಂಟ್, ಕಿರಣ ಬಿಳಿ ಅಂಗಡಿ ನೀಲಿ ಜೀನ್ಸ ಪ್ಯಾಂಟ, ಶಂಕ್ರೆಪ್ಪ ಗುಡದಿನ್ನಿ ಹಳದಿ ಮಿಶ್ರಿತ ಚೌಕಡಿ ಫುಲ್ ತೋಳ ಅಂಗಿ, ಬೂದು ಬಣ್ಣದ ಪ್ಯಾಂಟ್ ಹಾಗೂ ಮಲ್ಲಪ್ಪ ಹುದ್ದಾರ ಗುಲಾಬಿ ಅಂಗಿ, ಜೀನ್ಸ ಪ್ಯಾಂಟ್. ರಾಜು ತಿಳಿನೀಲಿ ಬಣ್ಣದ ಅಂಗಿ, ಕಪ್ಪು ಪ್ಯಾಂಟ್ ಹಾಕಿದ್ದ. ಇವರೂ 5 ಜನರು ಕಾರ ಡಿಕ್ಕಿ ಓಪನ್ ಮಾಡಿ ತಲ್ವಾರಗಳನ್ನು ತೆಗೆದುಕೊಂಡರು 5 ಜನರ ಕೈಯಲ್ಲಿ ತಲ್ವಾರಗಳಿದ್ದವು. ಕಾರಿನ ಹಿಂದಿನಿಂದ ಕಪ್ಪು ಬಣ್ಣದ ಬುಲೆಟ್ ಬಂತು ಅದರ ಮೇಲೆ ಶಂಕ್ರೆಪ್ಪ ಮತ್ತು ಲಕ್ಷ್ಮಣ ಜಕ್ಕಣ್ಣವರ ಸಿದ್ದು ಈಗ ಪುನಃ ಹೇಳುವುದೇನೆಂದರೆ ಶಂಕ್ರೆಪ್ಪ ಇರಲಿಲ್ಲ. ಇವರು ಬುಲೆಟನಿಂದ ಕೆಳಗೆ ಇಳಿದು ಕಾರ ಡಿಕ್ಕಿಯಿಂದ 2 ಕೊಡಲಿಗಳನ್ನು ತೆಗೆದುಕೊಂಡರು.

ಸ್ಪ್ಲೆಂಡರ್ ಬೈಕನಲ್ಲಿ ಶ್ರೀಶೈಲ ವಾಲಿಮರದ, ಯಲ್ಲಪ್ಪ ನಾಗರೆಡ್ಡಿ, ಕಾಡಪ್ಪ ಕಂದಗಲ್. ಶ್ರೀಶೈಲ ವಾಲಿಮರದ ಇವರ ಬಟ್ಟೆ ನೆಹರೂ ಅಂಗಡಿ ಬಿಳಿ ಧೋತರ, ಯಲ್ಲಪ್ಪ ನಾಗರೆಡ್ಡಿ ಬಟ್ಟೆ ನೆಹರೂ ಅಂಗಡಿ ಬಿಳಿ ಧೋತರ, ಕಾಡಪ್ಪ ಕಂದಗಲ್ ಪ್ಯಾಂಟ್ ಶರ್ಟು ಹಾಕಿದ್ದರು. ಇವರು ಬೈಕನಿಂದ ಕೆಳಗೆ ಇಳಿದು ಕಾರ ಡಿಕ್ಕಿಯಿಂದ 3 ಕುಡುಗೋಲು ತೆಗೆದುಕೊಂಡರು.

ಸ್ಪೆಂಡರ್ ಬೈಕನಲ್ಲಿ ಮುತ್ತಪ್ಪ ಹಾಗೂ ಕಾಡಪ್ಪ ನಾಗರೆಡ್ಡಿ ಇವರಿಬ್ಬರೂ ಪ್ಯಾಂಟ್ ಶರ್ಟು ಹಾಕಿದ್ದರು ಇವರು ಕಾರ ಡಿಕ್ಕಿಯಿಂದ 2 ಕುಡುಗೋಲು ತೆಗೆದುಕೊಂಡರು. ನಮ್ಮ ದೊಡ್ಡಪ್ಪ ವಿಠ್ಠಲ ತಳಗೇರಿ ಇವರು 13 ಜನರನ್ನು ನೋಡಿ ಅಂಜಿ ಬಲಜೇಬಿನಿಂದ ಬಲಗೈಯಿಂದ ಫೋನ್ ಮಾಡಿ ಮಹಾಂತೇಶ ನನ್ನ ಕಡಿಯಾಕತ್ಯಾರೋ ನನ್ನ ಕಡಿಯಾಕತ್ಯಾರೋ ಎಂದು ಹೇಳಿದ. ಆಗ ರಾಜು ಇವನು ವಿಠ್ಠಲ ತಳಗೇರಿ ಇವರ ಬಲ ಮೊಣಕೈಯನ್ನು ಕಡಿಯುತ್ತಾನೆ, ವಿಠ್ಠಲ ತಳಗೇರಿ ಗಣಿ ಯವರ ತೋಟದಲ್ಲಿ ಓಡಿ ಹೋಗುವಾಗ ಅರುಣ ಇವನು ವಿಠ್ಠಲ ತಳಗೇರಿ ಇವರ ಎಡಗಾಲನ್ನು ಜಗ್ಗಿ ಬಲ ಕುತ್ತಿಗೆ ಭಾಗಕ್ಕೆ ತಲ್ವಾರನಿಂದ ಹೊಡೆದಿದ್ದಾನೆ.

ಕಿರಣ ತಲೆಯಿಂದ ಕುತ್ತಿಗೆವರೆಗೂ ತಲ್ವಾರನಿಂದ ಕಡಿದಿರುತ್ತಾನೆ. ಮೂಗು, ಕಣ್ಣು, ಬಾಯಿ ಹರಿದಿರುತ್ತದೆ. ಶಂಕ್ರೆಪ್ಪ ಎಡಗೈಯಿಂದ ಹೆಬ್ಬೆರಳನ್ನು ಬಿಟ್ಟು ಉಳಿದ 4 ಬೆರಳುಗಳನ್ನು ಕಟ್ ಮಾಡುತ್ತಾನೆ. ಲಕ್ಷ್ಮಣ ಜಕ್ಕನವರ ಮಾದಿಗ ಸೂಳೆ ಮಕ್ಕಳು ಇವರನ್ನು ಬಿಡಬೇಡ ನಮ್ಮ ಮೇಲೆ ಕೇಸು ಹಾಕುತ್ತಾರೆ ಮನೆ ಒಡೆದಿರುವುದಕ್ಕೆ ಶ್ರೀಶೈಲ ವಾಲಿಮರದ ಕೋರ್ಟ ಕಾನೂನು ಏನೂ ಮಾಡಂಗಿಲ್ಲ, ಬಿಡಾಕ ಹೋಗಬ್ಯಾಡ್ರಿ ಎಂದು ಕಡಿಯುವರೆಗೆ ಪ್ರೊತ್ಸಾಹ ನೀಡುತ್ತಿದ್ದರು. ಆಗ ನನ್ನ ಅಜ್ಜ ಮಲ್ಲೆಪ್ಪ ತಳಗೇರಿ ಕೈ ಮುಗಿದು ಕಾಲು ಬಿದ್ದು ನನ್ನ ಮಗನನ್ನು ಕಡಿಯಬ್ಯಾಡ್ರಿ ಎಂದರು ಹಾಗೂ ನನ್ನ ಅಜ್ಜ ಕೈಯಿಂದ ಅವರನ್ನು ನೂಕುವಾಗ ಅರುಣ ನಿನ್ನದು ಏನೂ ಇಲ್ಲ ಮುತ್ಯಾ ಹೋಗು ಎಂದಾಗ ರಾಜು ಬಲಗೈಯಿಂದ ಮಲೆಪ್ಪ ತಳಗೇರಿ ಇವರಿಗೆ ಕಲ್ಲು ಎಸೆಯುತ್ತಾನೆ. ಮಲ್ಲಪ್ಪ ಹುದ್ದಾರ ಮಲೆಪ್ಪ ತಳಗೇರಿ ಇವರಿಗೆ ಎಡಕುತ್ತಿಗೆ ಭಾಗಕ್ಕೆ ತಲ್ವಾರನಿಂದ ಕಡಿದನು. ನನ್ನ ಅಜ್ಜ ಮಲೆಪ್ಪ ತಳಗೇರಿ

ಕಲ್ಲೋಳ್ಳಿ ರಸ್ತೆಯಲ್ಲಿ ಅಂಗಾತಿ ಬಿದ್ದಿದ್ದು, ನನ್ನ ಅಜ್ಜನ ರಕ್ತ ಬಹಳ ಬಿದ್ದಿತ್ತು. 13 ಜನ ಕಾರು ಗಾಡಿ ಡಿಕ್ಕಿ ಓಪನ್ ಮಾಡಿ ತಲ್ವಾರ ಕೊಡಲಿ ಕುಡುಗೋಲು ಅದರಲ್ಲಿ ಹಾಕಿ ಕಾರನಲ್ಲಿ ಬಂದವರು ಕಾರಿನಲ್ಲಿ ಹತ್ತಿ, ಬೈಕನಲ್ಲಿ ಬಂದವರು ಬೈಕ್‌ನಲ್ಲಿ ಹತ್ತಿ ದೊಡ್ಡ ಕೆನಾಲ್ ರಸ್ತೆಯಲ್ಲಿ ಹೋಗುವಾಗ ವಿಠ್ಠಲ ತಳಗೇರಿ ಇವರ ಶೈನ್ ಹೊಂಡಾ ಬೈಕಗೆ ಹಾಯಿಸಿಕೊಂಡು ಫುಲ್ ಸ್ಪೀಡನಲ್ಲಿ ಹೋದರು. ಕಾರ ಗಾಡಿ ನಂಬರ ಪ್ಲೇಟ್ ಅಲ್ಲಿಯೇ ಬಿದ್ದಿತ್ತು.

ನಂತರ ನನ್ನ ಅಜ್ಜಿ, ಅತ್ತೆ, ಅವ್ವ ಅವರಿಗೆ ಯಾರೋ ಒಬ್ಬರು ಎಕ್ಸಿಡೆಂಟ್ ಆಗಿದೆ ಎಂದು ಹೇಳಿದರು. ಅವರು ಬೇಗ ಬೇಗನೆ ಕಲ್ಲೋಳ್ಳಿ ರಸ್ತೆಗೆ ಅಳುತ್ತ ಚೀರಾಡುತ್ತ ಬಂದರು. ನಾವು ಪಕ್ಕದಲ್ಲಿ ನಿಂತು ಹೋಗಿದ್ದೆವು ಕಲ್ಲೊಳ್ಳಿ ಹೆಣ ಬಿದ್ದಲ್ಲಿ ನಾವು ಹೋಗಿದ್ದೆವು. ಲೋಕಾಪುರ ಹೊಲದ ಪಕ್ಕದಲ್ಲಿ ಫೂಲ್ ಇತ್ತು. ನೀರು ಹೋಗುವ ಫೂಲ್ ಪಕ್ಕದಲ್ಲಿ ನಿಂತು ಎಲ್ಲವನ್ನೂ ನೋಡಿದ್ದೆವು. ನಾವು ಬಿಡಿಸಿಕೊಳ್ಳಲು ಹೋಗಬೇಕೆಂದರೆ ಅವರು ನಮ್ಮನ್ನು ಏನಾದರೂ ಮಾಡುತ್ತಾರೆ ಎಂದು ಅಂಜಿ ಎಲ್ಲ ನೋಡಿದ್ದೆವು, ಅವರು ಹೋದ ತಕ್ಷಣ ನಾವು ಅಲ್ಲಿಗೆ ಹೋದೆವು. ನನ್ನ ದೊಡ್ಡಪ್ಪ ವಿಠ್ಠಲ ತಳಗೇರಿ ಗಣಿ ಯವರ ತೋಟದ ಮುಳ್ಳಿನ ಕಂಟಿಯಲ್ಲಿ ಬಿದ್ದಿದ್ದರು, ಸತ್ತಿದ್ದರು, ಅವರ ಬಟ್ಟೆಯೆಲ್ಲ ರಕ್ತದ ಕಲೆಯಾಗಿದ್ದವು, ಅವರ ಚಪ್ಪಲಿ, ಗಾಡಿ, ಪೋನ್ ಬಿದ್ದಿದ್ದವು.

ಮಲೆಪ್ಪ ತಳಗೇರಿ ಇವರ ಪೋನ್ ಚಪ್ಪಲಿ ಬಿದ್ದಿದ್ದವು. ನಂತರ ಜನ ಕೂಡುತ್ತಿದ್ದರು. ಅಲ್ಲಿರುವ ಒಬ್ಬ ಅಂಕಲ್ ಪೊನ್ ತೆಗೆದುಕೊಂಡು ನನ್ನಪ್ಪ ಕಾಡಪ್ಪ ತಳಗೇರಿ ಇವರಿಗೆ ಫೋನ್ ಮಾಡಿ 13 ಜನರ ಹೆಸರು ಹೇಳಿ, ಕಾರಿನಲ್ಲಿ ಬಂದರು, ಬೈಕ ಮೇಲೆ ಬಂದರು,

ಅವರು ನಮ್ಮೂರಿನವರಾಗಿದ್ದರು ಎಂದು ಹಾಗೂ ಮೇಲಿನ ವಿಷಯವನ್ನು ಎಲ್ಲವನ್ನು ಹೇಳಿ ಫೋನ್ ಇಟ್ಟಿರುತ್ತೇನೆ.

ನನ್ನ ದೊಡ್ಡಪ್ಪ ಯಲ್ಲಪ್ಪ ತಳಗೇರಿ ಘಟನೆಯಾದ ಸ್ಥಳಕ್ಕೆ ಬಂದರು. ಮೇಲೆ ಹೇಳಿದ 13 ಜನರ ಹೆಸರನ್ನು ಹಾಗೂ ವಿಷಯವನ್ನು ಯಲ್ಲಪ್ಪ ತಳಗೇರಿ ಇವರಿಗೆ ಹೇಳಿದ್ದೇನೆ. ನಾನು ಮತ್ತು ಕಾಂಚನಾ ಓಡಿಕೊಂಡು ಯಲ್ಲಪ್ಪ ರವರ ಮನೆಗೆ ಬಂದೆವು. ಮನೆಯಲ್ಲಿ ಸದಾಶಿವ, ಶಾಂತವ್ವ ಹಾಗೂಉಳಿದ ಕುಟುಂಬ ಜನರು ಇದ್ದರು. ಅವರಿಗೆ ಹೆಸರನ್ನು ಹಾಗೂ ವಿಷಯವನ್ನು ಹೇಳಿದ್ದೇನೆ. ನಂತರ ಅಂಬ್ಯುಲೆನ್ಸ ಬಂದು ಹೆಣವನ್ನು ತೆಗೆದುಕೊಂಡು ಹೋದರು. ದಿನಾಂಕಃ 30-11-2019 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ದಿನಾಂಕಃ 22-11-2019 ರಂದು ಕೋರ್ಟ ಮುಂದೆ ಹೇಳಿಕೆ ನೀಡಿದ್ದೇನೆ. ಅದನ್ನು ನಿಪಿ-60 ಅಂತಾ, ಅದರ ಮೇಲಿನ ಸಹಿಗಳನ್ನು ನಿಪಿ-60(ಎ) ರಿಂದ 60(ಡಿ) ಅಂತಾ ಗುರುತಿಸಲಾಯಿತು. ನಿಪಿ-5 ರಿಂದ 8, 16, 17, 27, 28, 39, 40 ಫೋಟೋಗಳನ್ನು ನೋಡಿ ಗುರುತಿಸಿದ್ದೇನೆ. ಮುಮಾ-1 ರಿಂದ 4, 6 ರಿಂದ 13, 18 ರಿಂದ 20, 23 ನೋಡಿ ಗುರುತಿಸಿದ್ದೇನೆ. ನಾನು ನೋಡಿದಾಗ 5 ಹತಾರಗಳು, 5 ಕುಡುಗೋಲುಗಳು, 2 ಕೊಡಲಿಗಳು ಇದ್ದವು ನ್ಯಾಯಾಲಯಕ್ಕೆ ಪೋಲಿಸರು ಕೇವಲ 2 ಹತಾರಗಳನ್ನು ಹಾಜರುಪಡಿಸಿದ್ದಾರೆ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ವೇಳೆ ಕೇಳಿದ್ದರಿಂದ ವೆಚ್ಚ ಸಹಿತ ನೀಡಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

27-11-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.

**Spl.C. 3/2020.**

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.

| | | | |
|---|---|---|---|
| ಹೆಸರು | : | ವಿಶ್ವನಾಥ ಕಾಂಬಳೆ | ಫ್ರಾಸಾ-26 |
| ತಂದೆಯ ಹೆಸರು | : | ಅರ್ಜುನ | ಚಾಸಾ- 14 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಮುಧೋಳ | |

ದಿನಾಂಕಃ 27-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಹಾಗೂ ಚಾಸಾ-1 ಪರಿಚಯವಿಲ್ಲ. ಸುಮಾರು 2-3 ವರ್ಷಗಳ ಹಿಂದೆ 11.00-11.30 ಗಂಟೆಗೆ ಚಹಾ ಕುಡಿಯಲು ಠಾಣೆಯ ಹತ್ತಿರ ಹೋಗಿದ್ದೆವು. ಪೋಲಿಸರು ನನ್ನನ್ನು ಪರಿಚಯವಿರುವುದರಿಂದ ಕರೆದರು ಹಾಗೂ ಸಹಿ ಪಡೆದರು. ಸದರಿ ದಾಖಲೆ ಮೇಲೆ ಸಹಿ ನನ್ನದೇ ಇದ್ದು ಅದನ್ನು ನಿಪಿ-52 ಅಂತಾ, ಅದರ ಮೇಲಿನ ಸಹಿಯನ್ನು ನಿಪಿ-52(ಎ) ಅಂತಾ ಗುರುತಿಸಲಾಯಿತು. 7 ಪೋಟೋಗಳನ್ನು ನೋಡಿ ನಿಪಿ-53 ರಿಂದ 59 ಅಂತಾ ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ನಿಪಿ-53 ರಿಂದ 59 ಪೋಟೋ ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಅಲ್ಲಿ ಏನು ಪ್ರಕ್ರೀಯೇ ಮಾಡಿದ್ದಾರೆ ನನಗೆ ಗೊತ್ತಿಲ್ಲ ಎನ್ನುವುದು ನಿಜ, ಏಕೆಂದರೆ ಪೋಲಿಸರು ನನಗೆ ಹೇಳಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

27-11-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.